32

# ಪೇತ್ರನು ನೆಲಹಾಸಿನ ಮೇಲೆ ಕರೆಯಲ್ಪಟ್ಟಾಗ

# (11:1-18)

ಕಳೆದು ಹೋದ ದಿವಸಗಳಲ್ಲಿ, ಇಂಗ್ಲೆಂಡ್ ದೇಶದ ಅರಮನೆಗಳಲ್ಲಿ, ಕೂತುಕೊಳ್ಳುವ ಕೊಠಡಿ ಹಾಗೂ ವಿಶೇಷವಾದ ಕೊಠಡಿಗಳಲ್ಲಿ ಮಾತ್ರ ನೆಲ ಹಾಸುಗಳನ್ನು ಹಾಕುತ್ತಿದ್ದರು. ಒಂದು ಮನೆಯ ಯಜಮಾನನನ್ನು ಮುಂದೆ ಕರೆಯಲ್ಪಡುವಾಗ (ಸಾಮಾನ್ಯವಾಗಿ ವಾಗ್ದಂಡನೆಗೆ ಆಹ್ವಾನ) ಅದನ್ನು "ನೆಲಹಾಸಿಗೆ ಆಹ್ವಾನ," ಅಥವಾ "ಕಾರ್‌ಪೆಟೆಡ್" ಎಂದು ಹೇಳುತ್ತಿದ್ದರು. ಇತ್ತೀಚಿನ ದಿವಸಗಳಲ್ಲಿ "ಜನರನ್ನು ನೆಲಹಾಸಿಗೆ" ಕರೆಯುವ ಸಂಪ್ರದಾಯವನ್ನು ಇಂಗ್ಲೀಷ್ ಜನರು ಹೊಂದಿದ್ದರು. ವಿಚಾರಣೆಯನ್ನು ಮಾಡುವಾಗ, ಮೇಜಿನ ತುದಿ ಭಾಗದಲ್ಲಿ ಒಂದು ನೆಲಹಾಸಿನ ತುಂಡನ್ನು ಬಳಸುತ್ತಿದ್ದರು. ವಿಚಾರಣೆಯ ಸಮಯದಲ್ಲಿ, ವಿಚಾರಣೆಗೆ ಗುರಿಯಾದವನು ಆ ನೆಲಹಾಸಿನ ತುಂಡಿನ ಮೇಲೆ ಕುಳಿತಿರು ವಾಗ, ವಿಚಾರಿಸುವವರು ಆ ಮೇಜಿನ ಸುತ್ತಲೂ ಕುಳಿತಿರುತ್ತಿದ್ದರು. ಒಬ್ಬನು "ನೆಲಹಾಸಿಗೆ" ಕರೆ ಯಲ್ಪಟ್ಟನು ಅಂದರೆ ಅವನು "ವಿಚಾರಣೆಗೆ ಒಳಪಟ್ಟಿರುವನು" ಎಂಬುದು ಪ್ರಪಂಚದ ವಾಡಿಕೆಯಾಗಿದೆ.

"ನೆಲ ಹಾಸಿಗೆ ಆಹ್ವಾನ" ಅಂದರೆ ಅದು ಹಿತಕರವಾದ ಆಹ್ವಾನವಲ್ಲ, ಆದರೆ ಈ ಸಂಗತಿಯು, ಅನೇಕರಲ್ಲಿ ಯಾವುದಾದರೂ ಸಮಯದಲ್ಲಿ ಉಂಟಾಗಿರಬಹುದು. ಅದೇ ರೀತಿಯಾಗಿ, ಅಪೊಸ್ತಲನಾದ ಪೇತ್ರನು ಸಹ ಈ ರೀತಿಯಾದ ಆಹ್ವಾನವನ್ನು ಹೊಂದಿದನು ಎಂದು, ಈ ಮುಂದಿನ ಪಾಠದಲ್ಲಿ ನೋಡುತ್ತೇವೆ.[1]

ನಾವು ಕೊರ್ನೇಲಿಯನ ಮತ್ತು ಅವನ ಮನೆಯವರ ಪರಿವರ್ತನೆಯ ಕುರಿತು ಅಧ್ಯಯನ ಮಾಡಿದಾಗ, ಪೇತ್ರನ ಮತ್ತು ಅವನ ಸಂಗಡವಿದ್ದ ಆರು ಜನ ಯೆಹೂದ್ಯ ಕ್ರೈಸ್ತರ ಸಂದೇಹ ಗಳನ್ನು ದೇವರು ಪರಿಹರಿಸಿದ್ದನ್ನು ನೋಡಿದ್ದೇವೆ. ಅನ್ಯರನ್ನು ಸಭೆ ಅಂಗೀಕರಿಸುವ ಕುರಿತು, ಪೇತ್ರ ಮತ್ತು ಅವನ ಸಂಗಡಿಗರು ಸಂದೇಹವನ್ನು ಹೊಂದಿದ ಹಾಗೆ, ಇತರ ಯೆಹೂದ್ಯ ಕ್ರೈಸ್ತರು ಸಹ ಸಂದೇಹವನ್ನು ವ್ಯಕ್ತಪಡಿಸಿದ್ದರು - ಆದುದರಿಂದ ಪೇತ್ರನು ಯೆರುಸಲೇಮಿಗೆ ಹಿಂದಿರುಗಿದಾಗ, ಅವರೆಲ್ಲರೂ ಪೇತ್ರನನ್ನು ವಿಚಾರಣೆಗೆ ಕರೆದರು.

ಈ ರೀತಿಯಾದ ನೆಲಹಾಸಿಗೆಗೆ ನಾವುಗಳು ಕರೆಯಲ್ಪಟ್ಟಾಗ, ನಮ್ಮ ಪ್ರತಿಕ್ರಿಯೆ ಏನು? ಪೇತ್ರನು ಟೀಕಾಕಾರರ ನಡುವೆ ನಿಂತಾಗ ಆತನು ಹೇಗೆ ಪ್ರತ್ಯುತ್ತರ ಕೊಟ್ಟನು, ಅಲ್ಲಿ ಉಂಟಾದ ಪರಿಣಾಮದ ಕುರಿತು ನೋಡೋಣ.

## ಚಕಿತಗೊಳಿಸಿದ ಪ್ರತಿಕ್ರಿಯೆ (11:1-3)

"ಅನ್ಯ ಜನರು ಸಹ ದೇವರ ವಾಕ್ಯವನ್ನು ಅಂಗೀಕರಿಸಿದರೆಂಬ ಸಮಾಚಾರವನ್ನು ಅಪೊಸ್ತಲರ ಯೂದಾಯದಲ್ಲಿದ್ದ ಸಹೋದರರೂ, ಕೇಳಿದರು" (ವಚನ 1). ಪೇತ್ರನು ಕೈಸರೆಯಲ್ಲಿರುವಾಗ, ಅವನ ಚಟುವಟಿಕೆಗಳ ಕುರಿತ ಸಮಾಚಾರವು ಯುದಾಯದಲೆಲ್ಲಾ ಪ್ರಸಾರವಾಯಿತು. ಕೆಲವು ವಿಚಾರಗಳು ಸತ್ಯವಾಗಿದ್ದರೂ, ಕೂಡ ಕೆಲವರಲ್ಲಿ ತಪ್ಪಾದ ಸಂದೇಶಗಳು ಇದ್ದವು. (ಒಬ್ಬನು ತನ್ನ ಪಂಥದ ಕುದುರೆಗೆ "ಕೆಟ್ಟ ಸಂದೇಶ" ಎಂದು ಹೆಸರಿಟ್ಟಿದ್ದನು, ಆಗ ನಾನು ಏಕೆ ಆ ಅಪರಿಚಿತ ಹೆಸರು ಇಟ್ಟಿದ್ದಿ ಎಂದು ಕೇಳಲ್ಪಟ್ಟಾಗ, ಅವನು ನಗುತ್ತಾ "ಕೆಟ್ಟ ಸಂದೇಶವು ಬಹು ವೇಗವಾಗಿ ಓಡುತ್ತದೆ ಅಂದನು.")

ಪೇತ್ರನು ನಂತರ ಯೆರೂಸಲೇಮಿಗೆ[2] ಹಿಂದಿರುಗಿದನು, "ಯಾವಾಗ ಪೇತ್ರನು ಯೆರೂಸಲೇಮಿಗೆ ಹಿಂದಿರುಗಿದನೋ ಆಗ ಸುನ್ನತಿಯವರು[3] ನೀನು ಸುನ್ನತಿಯಿಲ್ಲದವರಲ್ಲಿ[4] ಸೇರಿ ಅವರ ಸಂಗಡ ಊಟ ಮಾಡಿದೆಯೆಲ್ಲಾ ಎಂದು ಅವನ ಕೂಡ ವಿವಾದಿಸಿದರು" (ವಚನಗಳು 2, 3). "ಸುನ್ನತಿಯವರು" ಎಂಬ ಪದವು ಯೆಹೂದ್ಯರಿಗೆ ಸೂಚನೆಯಾಗಿದೆ. ಇದರರ್ಥ "ಯೆಹೂದ್ಯರು" ಆದರೆ ಈ ವಚನದಲ್ಲಿ ಯೆಹೂದ್ಯ ಕ್ರೈಸ್ತರಿಗೆ ಸೂಚನೆಯಾಗಿದೆ. ಮೊದಲ ವಚನದಲ್ಲಿ ಕಾಣಿಸಿರುವ ಯೂದಾಯದಲ್ಲಿರುವ "ಅಪೊಸ್ತಲರು ಮತ್ತು ಸಹೋದರರು" ಎಂಬುದಾಗಿ ಕರೆಯಲ್ಪಡುವವರಿಗೆ ಇರಬಹುದು. ಪ್ರಾಯಶಃ ಸಭೆಯಲ್ಲಿ ಮೋಶೆಯ ಕಟ್ಟಳೆಗಳನ್ನು ನೆರವೇರಿಸುತ್ತಿದ್ದ, ಒಂದು ಗುಂಪಿನ ಜನರಿಗೂ ಸಹ ಅನ್ವಯರಾಗಿರಬಹುದು.[5] (ಫರಿಸಾಯರ ಗುಂಪಿನವರೂ ಆಗಿರಬಹದು [15:5] ನಂತರ ಅವರು ತೊಂದರೆ ಉಂಟು ಮಾಡಿದರು.) ಇತರೆ ಅಪೊಸ್ತಲರು ಅವರನ್ನು ಹತೋಟಿಗೆ ತಾರದ ಕಾರಣ, ಅವರು ಪೇತ್ರನನ್ನು ನೆಲಹಾಸಿಗೆ ಕರೆದಿರುವ ಸೂಚನೆಯು ಇದಾಗಿರುತ್ತದೆ; ಅಪೊಸ್ತಲರು ಅವರ ಕುರಿತು ಮನ ಮರುಗಿದವರೂ ಆಗಿರಬಹುದು ಎಂಬ ಸೂಚನೆಯಾಗಿದೆ.[6] ("ಸಾಧಾರಣವಾದ ಸಭೆಯ ಸದಸ್ಯರು" ಸಹ ಪೇತ್ರನನ್ನು "ನೆಲಹಾಸಿಗೆ" ಕರೆಯಬಹುದಾದ ಸನ್ನಿವೇಶದ ಮೂಲಕ, ಪೇತ್ರನು "ಸಭೆಗೆ ಮುಖ್ಯಸ್ಥನಾಗಿರ*ಲಿಲ್ಲ*" ಎಂಬ ಸೂಚನೆಯೂ ಇದೆ.)

ಪೇತ್ರನ ವಿರುದ್ಧವಿದ್ದ ದೂರು ಏನೆಂದರೆ, "ನೀನು ಸುನ್ನತಿಯಿಲ್ಲದ ಸ್ತ್ರೀ ಪುರುಷರಿಗೆ *ದೀಕ್ಷಾಸ್ನಾನಮಾಡಿಸಿ,*" ಆದರೆ "ಆ ಸುನ್ನತಿಯಿಲ್ಲದವರ ಸಂಗಡ ಊಟ ಮಾಡಿದೇ ಎಂಬುದೆ."[7] (ಒತ್ತಿ ಹೇಳಿದ್ದು ನನ್ನದು.) ಅನ್ಯರನ್ನು ಸಭೆಗೆ ಅಂಗೀಕರಿಸಲು, ಅನ್ಯೋನ್ಯತೆಯೇ ಅಡಚಣೆಯಾಗಿತ್ತು. ಅನ್ಯರು ದೀಕ್ಷಾಸ್ನಾನ ಮಾಡಿಸಿಕೊಂಡು, ಅವರ ಅನ್ಯೋನ್ಯತೆಯಲ್ಲಿ ಸೇರಬಾರದೆಂಬ ಅಡಚಣೆಯನ್ನೇ, ಆ ಟೀಕಾಕಾರರು ಮುಂದಿಟ್ಟಿದ್ದರು, ಆದರೆ ಅನ್ಯರು ಅವರ ಸಂಗಡ ಆರಾಧನೆಯಲ್ಲೂ ಅವರ ಬೋಜನಗಳಲ್ಲಿ ಪಾಲು ತಕ್ಕೊಳ್ಳುವ ಅಂಶವನ್ನು ಅವರು ನಿರಾಕರಿಸಿದ್ದರು![8] (ಅದನ್ನು ಪ್ರತ್ಯೇಕವಾದ ಗುಂಪು ಎಂದು ಪರಿಗಣಿಸಿರಲೂಬಹುದು.)

ಆದುದರಿಂದ, ನಾವು ಪೇತ್ರನು ಟೀಕೆಗೊಳಗಾದ ಕಥೆಯ ಪ್ರಾರಂಭವನ್ನು ನೋಡುತ್ತೇವೆ. ಆದರೆ ಅದೇ ನಮ್ಮ ಪ್ರಾಥಮಿಕವಾದ ಆಸಕ್ತಿಲ್ಲ. ಮೊದಲನೆಯದಾಗಿ, ಪೇತ್ರನು ನೆಲಹಾಸಿಗೆ ಆಹ್ವಾನ ಹೊಂದಿದಾಗ ಅವನಿಗೆ ಉಂಟಾದ ಟೀಕೆಯು ಪ್ರಮುಖವಾಗಿರದೇ, ಪೇತ್ರನ ಪ್ರತಿಕ್ರಿಯೆಯೇ ನಮಗೆ ಪ್ರಮುಖ ಪಾಠವಾಗಿದೆ.

## ಪೇತ್ರನು ಏನನ್ನು ಮಾಡಲಿಲ್ಲ (11:4-17)

ಪೇತ್ರನ ಪ್ರತಿಕ್ರಿಯೆಯಲ್ಲಿ ಇಲ್ಲದೆ ಇದ್ದ ಅಂಶಗಳನ್ನು ಕಾಣುವದಿಲ್ಲ ಎಂಬುದಾಗಿ ಪ್ರಾರಂಭಿಸುತ್ತೇವೆ. ಮೊದಲನೆಯದಾಗಿ, ಪೇತ್ರನ ನೆಲಹಾಸಿನ ಆಹ್ವಾನವು ಅವನಿಗೆ ಆಶ್ಚರ್ಯವನ್ನುಂಟುಮಾಡಲಿಲ್ಲ. ಅದರ ಬದಲಾಗಿ, ಅದನ್ನು ಅವನು ನಿರೀಕ್ಷಿಸಿದ್ದನು. ಅವನು ತನ್ನ ಸಂಗಡ ಆರು ಜನ ಯೆಹೂದ್ಯ ಕ್ರೈಸ್ತರೈನ್ನು ಕೈಸರೆಯಕ್ಕೆ ಕರೆದೊಯ್ದಿದ್ದನು (10:23, 45-47). ಆ ಮನುಷ್ಯರನ್ನು ಯೆರೂಸಲೇಮಿನಿಂದ ತನ್ನ ಜೊತೆಯಲ್ಲಿ ಕರೆತಂದಿದ್ದನು (11:12) ಅವರನ್ನು ಪುನಃ ಹಿಂದಿರುಗಿ ಯೊಪ್ಪಕ್ಕೆ ಕಳುಹಿಸಿರಲಿಲ್ಲ. ಸಾಧಾರಣವಾದ ಜನರ ಟೀಕೆಗೆ ನಾವುಗಳು ಗುರಿಯಾಗುವಾಗ ಆಶ್ಚರ್ಯಪಡುವುದು ಅನಗತ್ಯ. ಸಭಾ ಚರಿತ್ರೆಯಲ್ಲಿ ಪ್ರಖ್ಯಾತಿಗೊಂಡಿದ್ದ ವಿನ್‌ಸ್ಟನ್ ಚರ್ಚಿಲ್ ಎಂಬ ಮಹಾನ್ ವ್ಯಕ್ತಿಯು ಸಹ ಮಹಾಟೀಕೆಗೆ ಒಳಗಾಗಿದ್ದನು. ಅವರು ಆ ನಿಂದನೆಯನ್ನು "ಕಡಿಮೆಯಾಗಿ ಸಿಗುವ ವಸ್ತು ಅಲ್ಲ" ಎಂದು ಕರೆದಿದ್ದರು.[9]

ಎರಡನೆಯದಾಗಿ, ಪೇತ್ರನು ನೆಲಹಾಸಿಗೆ ಮೇಲೆ ಕರೆಯಲ್ಪಟ್ಟಾಗ ಮನನೋಯಿಸಿಲ್ಲ. ಅವನು, "ನೀವುಗಳು ಹೇಗೆ ನನಗೆ ಸವಾಲನ್ನು ಹಾಕುವಿರಿ! ನಾನು ಅಪೊಸ್ತಲನಲ್ಲವೇ, ಮತ್ತು ಅಪೊಸ್ತಲರಲ್ಲಿ ಮುಖ್ಯಸ್ಥನಲ್ಲವೇ! ಯೇಸು ನನಗೆ ನೀಡಿರುವ ಪರಲೋಕದ ರಾಜ್ಯದ ಬೀಗದ

ಕೈಗಳನ್ನು ನೆನಪುಮಾಡಿಕೊಳ್ಳಿರಿ!" ಎಂಬ ಉತ್ತರವನ್ನು ನೀಡದೆ, ಯಾವುದೇ ವರ್ಚಸ್ಸನ್ನು ಹೊಂದಿರುವ ಮನುಷ್ಯನು ಸಹ ಪರಿಶೀಲನೆಯಿಂದ ಹೊರತಾಗಿರುವದಿಲ್ಲ ಎಂದು ತೋರಿಸಿ ಕೊಟ್ಟನು.

ಮೂರನೆಯದಾಗಿ, "ಅವನ ಕೂಡ ವಿವಾದಿಸಿದರು" ವಚನ 2 ಎಂಬ ವಾಕ್ಯವು ಅವರು ಕಠಿಣವಾಗಿ ಅವನೊಂದಿಗೆ ವರ್ತಿಸಿದರು ಎಂಬುದಾಗಿರುತ್ತದೆ. ಪೇತ್ರನು ಸಹ ಅದನ್ನು ಹಗುರವಾಗಿ ಪರಿಗಣಿಸಲಿಲ್ಲ. ಅವನನ್ನು "ಟೀಕಿಸಿದರು" ಎಂದು NIVಯಲ್ಲಿ ತಿಳಿಸುತ್ತದೆ. "ಅವನಲ್ಲಿ ಅಪರಾಧವನ್ನು ಕಂಡು ಹಿಡಿಯಲು ಆರಂಭಿಸಿದರು." ಪೇತ್ರನು ಅವರನ್ನು ಗದರಿಸಿ, ಅವರ ಬಲಹೀನತೆಯನ್ನು ಎತ್ತಿ ತೋರಿಸಬಹುದಿತ್ತು - ಆ ವಿಧವಾದ ಪ್ರಕ್ರಿಯೆಗಳು ಸ್ವಾಭಾವಿಕವಾಗಿ ಏನನ್ನು ಮಾಡಿಲ್ಲ. ಕೆಟ್ಟದ್ದಕ್ಕೆ ಒಳ್ಳೆಯದನ್ನೇ ಮಾಡು ಎಂದು ಸತ್ಯವೇದವು ತಿಳಿಸುತ್ತದೆ (ಲೂಕ 6:27; ರೋಮಾಪುರ 12:21).

ಸಾಧಾರಣವಾದ ಜನರನ್ನು ಕರ್ತನು ಯಾವ ವಿಧದಲ್ಲಿ ಬದಲಾಯಿಸುವನು ಎಂಬ ವ್ಯಾಖ್ಯಾನವನ್ನು ಪೇತ್ರನಿಂದ ಕೇಳಿಸಿಕೊಳ್ಳುತ್ತೇವೆ. ಸುವಾರ್ತೆಗಳಲ್ಲಿ ನೋಡುವಂತೆ ಪೇತ್ರನು ಒಬ್ಬ ಉದ್ವೇಗದ ವ್ಯಕ್ತಿಯಾಗಿದ್ದನು, ತನ್ನ ಮನಸ್ಸಿನಲ್ಲಿರುವದನ್ನು ತಟ್ಟನೆ ಹೇಳುವವನು ಆಗಿದ್ದನು ಎಂದು ನೋಡುತ್ತೇವೆ. ಹಳೆಯ ದಿವಸಗಳಲ್ಲಿದ್ದ ಪೇತ್ರನಂತೆ ಅವನು ಇದ್ದು, ಅಪೊಸ್ತಲರ ಕೃತ್ಯಗಳು 11ರಲ್ಲಿರುವಂತೆ, ಅವನು ಟೀಕೆಗೆ ಒಳಗಾಗಿದ್ದರೆ, ಆಟೀಕೆಕಾರರು ಅದನ್ನೇ ಹಿಂದಕ್ಕೆ ಪಡೆಯುತ್ತಿದ್ದರು. ಈ ರೀತಿಯಾಗಿದ್ದರೆ ಯೆರೂಸಲೇಮಿನ ಸಭೆಯಲ್ಲಿ ಒಡಕು ಉಂಟಾಗುವದಕ್ಕೆ ಸಾಧ್ಯವಿತ್ತು. ಆದರೆ ಕರ್ತನು ಪೇತ್ರನನ್ನು ಪೂರ್ಣ ಬೆಳವಣಿಗೆಗೆ ನಡೆಸುತ್ತಿದ್ದನು.

## ಪೇತ್ರನು ಮಾಡಿದ್ದಾದರೂ ಏನು (11:4-17)

ಪೇತ್ರನು ನೆಲಹಾಸಿಗೆ ಕರೆಯಲ್ಪಟ್ಟಾಗ, ಪೇತ್ರನು ಮಾಡಿದ್ದಾದರೂ ಏನು? ಅವನನ್ನು ಜನರು ಈ ರೀತಿಯಾಗಿ ನಡೆಸಿಕೊಂಡದ್ದರಿಂದ ಪೇತ್ರನು ಅಲ್ಲಿಂದ ತಪ್ಪಿಸಿಕೊಳ್ಳದೆ ತನ್ನ ಮೇಲೆ ಅಪವಾದ ಮಾಡಿದವರ ಮುಂದೆ ಮುಖಾಮುಖಿಯಾಗಿ ನಿಂತುಕೊಂಡನು: ಮತ್ತು ಅವರ ಕಣ್ಣುಗಳಲ್ಲಿ ದೃಷ್ಟಿ ಇಟ್ಟನು. ಯೇಸು ಉಪದೇಶದಂತೆ, "ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವಿದೆ" ಎಂದು ತಿಳಿದಾಗ, "ನೀನೇ *ಮುಂದಾಗಿ* ಹೋಗಿ ಸಹೋದರನ ಸಂಗಡ ಒಂದಾಗು" ಎಂಬುದನ್ನು ನೆನಪಿಸಿಕೊಂಡನು (ಮತ್ತಾಯ 5:23, 24). ಇದನ್ನೇ ಪೇತ್ರನು ಮಾಡಿದನು - ಮತ್ತು ನಾನು ಮತ್ತು ನೀನು ಇದನ್ನೇ ಮಾಡಬೇಕು.

ಎರಡನೆಯದಾಗಿ, ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸದೆ, ಪೇತ್ರನು ದೀರ್ಘ ಶಾಂತನಾಗಿದ್ದನು. ಉನ್ಮಾದ ರೋಗ ಸೂಚಕ ಉದ್ರೇಕವು, ಉನ್ಮಾದ ರೋಗವನ್ನೆ ಹುಟ್ಟಿಸುತ್ತದೆ. ಟೀಕೆಗೆ ಒಳಗಾಗುವಾಗ ನೀವುಗಳು ಅತಿಯಾದ ಉದ್ವೇಗಕ್ಕೆ ಒಳಗಾದರೆ, ಟೀಕಾಕಾರರ ಸಂಗಡ ಮಾತನಾಡುವದಕ್ಕಿಂತ ಮೊದಲು, ನೀವು ಸಮಾಧಾನಕ್ಕೆ ಒಳಪಡಿರಿ.

ಮೂರನೆಯದಾಗಿ, ಪೇತ್ರನು ತನ್ನ ಆಲೋಚನೆಗಳನ್ನು ಕ್ರಮಪಡಿಸಿಕೊಂಡು, ವಿಷಯಗಳನ್ನು ಬಹಿರಂಗಪಡಿಸಿದನು: "ಆದರೆ ಪೇತ್ರನು ನಡೆದ ಸಂಗತಿಯನ್ನು ಅವರಿಗೆ ಮೊದಲಿನಿಂದ ಕ್ರಮವಾಗಿ ವಿವರಿಸಿದನು, ..." (ವಚನ 4). ತಣ್ಣಗಿರುವ ಟೀಕೆಗಳು ಉರಿಯುತ್ತಿರುವ ಬೆಂಕಿಯನ್ನು ನಂದಿಸಲಾರವು.

ಪೇತ್ರನು ತನಗುಂಟಾದ ದರ್ಶನವನ್ನು ವಿವರಿಸಲು ಆರಂಭಿಸಿದನು:[10]

> ನಾನು ಯೊಪ್ಪ ಪಟ್ಟಣದಲ್ಲಿ ಪ್ರಾರ್ಥನೆಮಾಡುತ್ತಿದ್ದಾಗ ಧ್ಯಾನ ಪರವಶನಾಗಿದ್ದ ನನಗೆ ಒಂದು ದರ್ಶನವಾಯಿತು; ಅದೇನಂದರೆ ಆಕಾಶದಿಂದ ನಾಲ್ಕು ಮೂಲೆಗಳನ್ನು

ಹಿಡಿದಿದ್ದ ದೊಡ್ಡ ಜೋಳಿಗೆಯಂತಿರುವ ಒಂದು ವಸ್ತುವು ಇಳಿಸಲ್ಪಟ್ಟು ನಾನಿದ್ದಲ್ಲಿಗೆ ಬಂತು. ಅದೇನೆಂದು ತಿಳುಕೊಳ್ಳುವದಕ್ಕೆ ನಾನು ಚೆನ್ನಾಗಿ ನೋಡಿದಾಗ ನೆಲದ ಮೇಲೆ ತಿರುಗಾಡುವ ಪಶು ಮೃಗ ಕ್ರಿಮಿಕೀಟಗಳನ್ನೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳನ್ನು ಕಂಡೆನು (ವಚನಗಳು 5, 6).

ಪೇತ್ರನಿಗೆ ತನಗುಂಟಾದ ದರ್ಶನವನ್ನು ವಿವರಿಸುವ ಮೂಲಕವಾಗಿ ಅವನಲ್ಲಿದ್ದ ತನ್ನ ತಿಳುವಳಿಕೆಯನ್ನು ಪ್ರಕಟಿಸಿದನು. ಮತ್ತು ಹಾಗೆಯೇ ಟೀಕಾಕಾರರಿಗೆ ಪ್ರತ್ಯುತ್ತರ ನೀಡಿದನು. ಅವನ ಟೀಕಾಕಾರರ ಆಲೋಚನೆಯನ್ನು ಅವನು ಅರಿತಿವನಾಗಿದ್ದನು ಎಂಬುದನ್ನು ಪ್ರಕಟಿಸಿದನು. "ಆಗ, ಪೇತ್ರನೇ ಎದ್ದು ಕೊಯ್ದು ತಿನ್ನು ಎಂದು ನನಗೆ ಹೇಳುವ ವಾಣಿಯನ್ನು ಕೇಳಿದೆನು, ನಾನು - ಬೇಡವೇ ಬೇಡ, ಸ್ವಾಮಿ, ಹೊಲೆಯಾದ ಪದಾರ್ಥವಾಗಲಿ ಅಶುದ್ಧ ಪದಾರ್ಥವಾಗಲಿ ಎಂದು ನನ್ನ ಬಾಯೊಳಗೆ ಸೇರಿದ್ದಿಲ್ಲ ಅಂದನು" (ವಚನಗಳು 7, 8).[11] ಇನ್ನೊಂದು ಪದದಲ್ಲಿ, ಪೇತ್ರನು, "ನಾನು ಮಾಡಿರುವ ಕ್ರಿಯೆಯು ನಿಮಗೆ ಅಸಮಧಾನವನ್ನು ತಂದಿರಬಹುದು ಎಂದು ನಾನು ತಿಳಿಯುತ್ತೇನೆ!" ಕೆಲವು ದಿವಸಗಳ ಹಿಂದೆನಾನು ಸಹ ಇದೇ ವಿಧವಾದ ಭಾವನೆಯನ್ನು ಹೊಂದಿದ್ದೆನು. ಎಂದನು! ಟೀಕಾಕಾರಿಗೆ ಪ್ರತ್ಯುತ್ತರ ನೀಡುವಾಗ, ನಿಮ್ಮ ಟೀಕಾಕಾರರಲ್ಲಿರುವ ಆಲೋಚನೆಯನ್ನು ಗ್ರಹಿಸಿಕೊಂಡವರಾಗಿ, ಪ್ರತ್ಯುತ್ತರ ನೀಡಬೇಕು.

ಪೇತ್ರನು ತನ್ನ ದರ್ಶನದ ವಿಷಯವನ್ನು ಮುಂದುವರಿಸಿ: "ಅದಕ್ಕೆ - ದೇವರು ಶುದ್ಧ ಮಾಡಿದ್ದನು ನೀನು ಹೊಲೆ ಎನ್ನಬಾರದು ಎಂಬುದಾಗಿ ಎರಡನೆಯ ಸಾರಿ ಆಕಾಶವಾಣಿ ಯಾಯಿತು, ಹೀಗೆ ಮೂರು ಸಾರಿಯಾಯಿತು" ಎಂದು ಹೇಳಿದನು, ಆಮೇಲೆ ಎಲ್ಲವೂ ತಿರಿಗಿ ಆಕಾಶಕ್ಕೆ ಎತ್ತಲ್ಪಟ್ಟಿತು ಎಂದನು (ವಚನಗಳು 9, 10). "ದೇವರು" ಎಂಬ ಪದವನ್ನು ಬಳಸಿರುವನು. ಪೇತ್ರನ ಸಂದೇಶದ ಮುಖ್ಯ ತಾತ್ಪರ್ಯವೇನೆಂದರೆ ಆ ಕಾರ್ಯವನ್ನು ಅವನಾಗಿ ಮಾಡದೆ ದೇವರು ಹೇಳಿದ್ದನ್ನೇ ಅವನು ಮಾಡಿದನು ಎಂಬುದಾಗಿದೆ. ಪೇತ್ರನಿಗುಂಟಾದಂಥ ದರ್ಶನವನ್ನೆ ನಾವೆಲ್ಲರೂ ನೀಡಲು ಸಾಧ್ಯವಿಲ್ಲ, ಆದರೆ, ದೇವರ ಚಿತ್ತವನ್ನು ಪ್ರಕಟಿಸುವ ವಾಕ್ಯಗಳು ನಮ್ಮಲ್ಲಿವೆ. ನಾವು ಮಾಡುವಂಥ ಕೆಲವು ಸಂಗತಿಗಳು ಟೀಕೆಯನ್ನು ಉಂಟುಮಾಡಬಹುದು, ನಮ್ಮ ಕ್ರಿಯೆಗಳಿಗೆ ಹಿನ್ನೆಲೆಯಾಗಿ "ಪುಸ್ತಕವನ್ನು ಅಧ್ಯಾಯವನ್ನು ಮತ್ತು ವಚನಗಳನ್ನು" ಹೊಂದಿರಬೇಕು.

ಪೇತ್ರನು ಈ ವಿಷಯದಲ್ಲಿ ದೇವರು ದಯಪಾಲಿಸುವ ಮಾರ್ಗದರ್ಶನದ ಬಗ್ಗೆ ತಿಳಿಸುತ್ತಿರುವನು: "ಆ ಕ್ಷಣದಲ್ಲೇ ಮೂರು ಮಂದಿ ಮನುಷ್ಯರು ನಾವಿರುವ ಮನೆಯ *ಮುಂದೆ ನಿಂತಿದ್ದರು*, ಅವರು ಕೈಸರೈಯದಿಂದ ನನ್ನ ಹತ್ತಿರಕ್ಕೆ ಕಳುಹಿಸಲ್ಪಟ್ಟವರು, ದೇವರಾತ್ಮನು ನೀನು ಏನು ಬೇಧ ಮಾಡದೆ ಅವರ ಜೊತೆಯಲ್ಲಿ ಹೋಗು ಎಂದು ನನಗೆ ಹೇಳಿದನು" (ವಚನಗಳು 11, 12ಎ; ಒತ್ತಿ ಹೇಳಿದ್ದು ನನ್ನದು). ಪೇತ್ರನು ದೇವರ ಸಮಯವನ್ನು ಅರಿತುಕೊಂಡನು.

ನಂತರ ಪೇತ್ರನು ತಾನು ಹೇಳುತ್ತಿದ್ದ ವಿಷಯಗಳು ಸತ್ಯವಾದವು ಎಂದು ರುಜುವಾತುಪಡಿಸಿದನು. ಮುಖ್ಯವಾಗಿ ತನ್ನ ಸಂಗಡ ಕರಕೊಂಡು ಹೋದ ಯೆಹೂದ್ಯ ಸಾಕ್ಷಿಗಳ ಕುರಿತು ತಿಳಿಸಿದನು: "ಈ ಆರು ಮಂದಿ ಸಹೋದರರು ಸಹ ನನ್ನ ಸಂಗಡ ಬಂದರು" (ವಚನ 12ಬಿ). ಹಳೆ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆಯೂ ಸಹ ಸಾಕ್ಷಿಗಳ ಕುರಿತು ಪ್ರಾಮುಖ್ಯತೆಯನ್ನು ತಿಳಿಸುತ್ತವೆ (ಧರ್ಮೋಪದೇಶಕಾಂಡ 17:6; ಮತ್ತಾಯ 18:16). ಪೇತ್ರನು ಪ್ರೇರಿತನಾದ ಅಪೊಸ್ತಲನಾಗಿದ್ದರೂ, ಅವನು ಹೇಳುತ್ತಿರುವದನ್ನು ಅವನ ಕೇಳುಗರು ಕೇಳಲೇಬೇಕೆಂದು ಬಯಸಲಿಲ್ಲ. ಕೆಲವು ಸಾರಿ ನಾವುಗಳು ನೆಲಹಾಸಿನ ಮೇಲೆ ಕರೆಯಲ್ಪಟ್ಟಾಗ, ಜನರು ನಮ್ಮ ಮಾತನ್ನು ಹಾಗೂ ಭಾವನೆಗಳನ್ನು ಕೇಳದೆ ಹೋದರೆ,

ನೊಂದುಕೊಳ್ಳುತ್ತೇವೆ, ಆದಿ ಸಭೆಯಲ್ಲಿದ್ದ ಮಹಾನ್ ನಾಯಕನಿಗೇ ಸಾಕ್ಷಾಧಾರಗಳ ಅಗತ್ಯತೆ ಇರುವಾಗ, ನಮ್ಮ ಕುರಿತಾಗಿ ಏಕೆ ಆಶ್ಚರ್ಯಪಡಬೇಕು?

ಆ ಆರು ಜನರ ಸಾಕ್ಷಾದ್ಧಾರಗಳ ನಿಮಿತ್ತ ಪೇತ್ರನು ಹೇಳುತ್ತಿದ್ದ ಕಥೆಗೆ ಸ್ಫೂರ್ತಿ ಉಂಟಾಯಿತು, ನಂತರ ಪೇತ್ರನು ದೃಢಪಡಿಸಿದ್ದೇನೆಂದರೆ:

> ... ಆ ಮನುಷ್ಯನ ಮನೆಯೊಳಗೆ[12] ನಾವು ಸೇರಲು ಅವನು ನಮಗೆ - ಒಬ್ಬ ದೇವದೂತನು ನನ್ನ ಮನೆಯಲ್ಲಿ ನಿಂತಿರುವದನ್ನು ಕಂಡೆನು. ಆ ದೂತನು - ನೀನು ಯೊಪ್ಪಕ್ಕೆ ಕಳುಹಿಸಿ ಪೇತ್ರನೆನಿಸಿಕೊಳ್ಳುವ ಸೀಮೋನನನ್ನು ಕರಿಸು; ಅವನು ನಿನಗೆ ಕೆಲವು ಮಾತುಗಳನ್ನು ಹೇಳುವನು, ಆ ಮಾತುಗಳಿಂದ ನಿನಗೂ ನಿನ್ನ ಮನೆಯವರೆಲ್ಲರಿಗೂ ರಕ್ಷಣೆಯಾಗುವದು ಎಂದು ಹೇಳಿದನೆಂಬುದಾಗಿ ತಿಳಿಸಿದನು (ವಚನಗಳು 12ಸಿ-14).

ಪೇತ್ರನು ಮಾತ್ರ ದೇವರಿಂದ ಪ್ರೇರಿತವಾದವನಾಗದೇ, ಅವನು ಸಂಧಿಸಿದ ಅನ್ಯರು ಸಹ ಪ್ರೇರಿತಗೊಂಡಿದ್ದರು.

ನಂತರ ಕೈಸರೈಯದಲ್ಲಾದ ಘಟನೆಯ ಪ್ರಮುಖ ಅಂಶವನ್ನು ಪೇತ್ರನು ತಿಳಿಸಿ: "ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮ ವರವು ಮೊದಲು[13] ನಮ್ಮ ಮೇಲೆ[14] ಇಳಿದಂತೆ ಅವರ ಮೇಲೆಯೂ ಇಳಿಯಿತು - ನಾನು ಕರ್ತನು ಹೇಳಿದ ಮಾತಿನ ವಿಧವನ್ನು ನೆನಪು ಮಾಡಿಕೊಂಡೆನು," "ಯೋಹಾನನಂತೂ ನೀರಿನ ದೀಕ್ಷಾಸ್ನಾನ ಮಾಡಿಸಿದನು; ನಿಮಗಾದರೋ ಪವಿತ್ರಾತ್ಮನಲ್ಲಿ ಸ್ನಾನವಾಗುವದು" (ವಚನಗಳು 15, 16; ಹೋಲಿಸು 1:5). ಪೇತ್ರನ ಓದುಗರಿಗೆ ಆಶ್ಚರ್ಯವುಂಟಾಯಿತು, ಅವರೆಲ್ಲರೂ ಆ ಆರುಜನ ಯೆಹೂದ್ಯ ಕ್ರೈಸ್ತರಾದ ಸಾಕ್ಷಿಗಳ ಕಡೆಗೆ ತಿರುಗಿಕೊಂಡು, "ಇದು ನಿಜವಾಗಿದೆಯೇ ಎಂದು ಕೇಳಿರಬಹುದು? ಪಂಚಾಶತ್ತಮ ದಿನದಲ್ಲಿ ಅಪೊಸ್ತಲರು ಹೊಂದಿದಂಥ ದೀಕ್ಷಾಸ್ನಾನವನ್ನು ಅನ್ಯರೂ ಸಹ ಹೊಂದಿದರೆ?" ಆ ಆರು ಜನ ಸಾಕ್ಷಿಗಳು ಈ ಮಾತಿಗೆ ತಲೆಯಾಡಿಸಿ; ಪೇತ್ರನ ಮಾತುಗಳು ಸತ್ಯವಾದವು ಎಂದು ದೃಢೀಕರಿಸಿದರು.

ಪೇತ್ರನು ತಾನು ಹೇಳಬೇಕಾದದ್ದನ್ನು ಕ್ರಮವಾಗಿ ವಿವರಿಸಿದ ನಂತರ: "ದೇವರು ಕರ್ತನಾಗಿರುವ ಯೇಸು ಕ್ರಿಸ್ತನಲ್ಲಿ[15] ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿರಲಾಗಿ ದೇವರನ್ನು ತಡೆಯುವುದಕ್ಕೆ ನಾನು ಶಕ್ತನೋ?" (ವಚನ 17). ಪೇತ್ರನು ಪರೋಕ್ಷವಾಗಿ, "*ನೀವು* ನನ್ನ ಸ್ಥಾನದಲ್ಲಿದಿದ್ದರೆ, ದೇವರನ್ನು ತಡೆಯುತ್ತಿದ್ದಿರೋ?" ಎಂದು ಕೇಳುತ್ತಿರುವನು. ನೀವು ನೆಲಹಾಸಿಗೆ ಕರೆಯಲ್ಪಟ್ಟಾಗ ನೀವು ನಿಮ್ಮನ್ನು ಟೀಕಾಕಾರರ ಸ್ಥಾನಕ್ಕೂ, ಅವರನ್ನು ನಿಮ್ಮ ಸ್ಥಾನಕ್ಕೂ ಇರಿಸಿಕೊಂಡವರಾಗಿ ಮಾತನಾಡಬೇಕು.

ಪೇತ್ರನನ್ನು ಪ್ರಶ್ನೆಗೆ ಒಳಪಡಿಸಿದಾಗ, ಪೇತ್ರನು ನಿರ್ವಹಿಸಿದ ನಿರ್ವಹಣೆಯನ್ನು ಅಧ್ಯಯನ ಮಾಡಿರಿ.[16] ಇದರಿಂದ ನೀವು ಮುಂದೆ ಟೀಕೆಗೊಳಗಾದಾಗ, ಅನುಭವಿಗಳಾಗಿ ಅವರ ಮುಂದೆ ನಿಲ್ಲಲು ಸಾಧ್ಯವಾಗುತ್ತದೆ.

## ಸಂತೃಪ್ತಕರವಾದ ಫಲಿತಾಂಶ (11:18)

ವಚನ 18ರಲ್ಲಿ ಕಾಣಿಸಿರುವ ಸಂತೃಪ್ತಿಕರವಾದ ಫಲಿತಾಂಶಕ್ಕಿಂತಲೂ ಹೆಚ್ಚಿನದನ್ನು ಹೊಂದಲು ಸಾಧ್ಯವಿಲ್ಲ. ವಚನವು ಆರಂಭಗೊಂಡು, "ಅವರು ಇದನ್ನು ಕೇಳಿ, ..." ಪೇತ್ರನ ಟೀಕಾಕಾರರು ಅವನ ಮಾತನ್ನು ಆಲಿಸಿದರು, ಮಾತಿನ ಸಂಭಾಷಣೆಯು ಭಿನ್ನಾಭಿಪ್ರಾಯಗಳನ್ನು ಶಮನ ಮಾಡುತ್ತದೆ, ಇದರ ಮೂಲಕ ಇತರರು ಆಲಿಸುವಂತೆ ಮಾಡಬಹುದು.

ನಂತರದ ವಚನದಲ್ಲಿ, "ಅವರು ಅಕ್ಷೇಪಣೆ ಮಾಡುವದನ್ನು ಬಿಟ್ಟರು" (ವಚನ 18ಬಿ). ಸಾಮಾನ್ಯವಾಗಿ, ಪೇತ್ರನ ಈ ಮುಖಾಮುಖಿ ಬೇಟಿಯು, ಗದ್ದಲವಾಗುವ ಸಂದರ್ಭವಾಗಿತ್ತು. ವಿರೋಧ ವ್ಯಕ್ತಪಡಿಸಲಾಗಿತ್ತು, ಕೋಪವು ಉಂಟಾಗಬಹುದಿತ್ತು, ದೊಡ್ಡ ಶಬ್ಧವು ಉಂಟಾಗುವದಿತ್ತು - ಆದರೆ ಪೇತ್ರನ ಗೌರವಪೂರ್ಣವಾದ ಪ್ರತ್ಯುತ್ತರವು ಅವೆಲ್ಲವುಗಳನ್ನು ಶಮನಮಾಡಿತ್ತು. ಇದರ ಮುಖಾಂತರ, "ಮೃದುವಾದ ಪ್ರತ್ಯುತ್ತರವು ಸಿಟ್ಟಾನ್ನಾರಿಸುವದು; ಬಿರುನುಡಿಯು ಸಿಟ್ಟನ್ನೆರಿಸುವದು," ಎಂಬುದು ಸಾಭೀತಾಗಿದೆ (ಜ್ಞಾನೋಕ್ತಿಗಳು 15:1).

ಪೇತ್ರನ ಟೀಕಾಕಾರರು ಮೌನವಾದದ್ದು ಮಾತ್ರ ತೃಪ್ತಿಕರವಾದ ವಿಷಯವಾಗಿರದೆ, "ಅವರು ದೇವರನ್ನು ಕೊಂಡಾಡಿದ್ದರು" ಎಂಬುದು ಪ್ರಮುಖವಾಗಿದೆ (ವಚನ 18ಸಿ). ಆ ನಡೆದಂತ ಸಕಲ ವಿಚಾರಗಳಲ್ಲಿ ದೇವರ ಹಸ್ತವಿರುವದನ್ನು ಅವರು ಗಮನಿಸಿದರು, ಮತ್ತು ಅವರುಗಳು ಕರ್ತನನ್ನು ತಡೆಯಬಾರದೆಂದು ಸಹ ಅರಿತರು. ಆದುದರಿಂದ, "ಅವರು ಹಾಗಾದರೆ *ದೇವರು* ಅನ್ಯ ಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ"[17] (ವಚನ 18ಡಿ). ಯೆಹೂದ್ಯರ ಮತ್ತು ಅನ್ಯರ ನಡುವೆ ಇದ್ದ ಇನ್ನೊಂದು ಭಲವಾದ ಅಡಚಣೆಯು ಮುರಿದುಹಾಕಲ್ಪಟ್ಟಿತು.

## ಮುಕ್ತಾಯ

ಮುಂದಿನ ಸಾರಿ ನೀವು ನೆಲಹಾಸಿಗೆ ಮೇಲೆ ಕರೆಯಲ್ಪಟ್ಟಾಗ, ಅಪೊಸ್ತಲರ ಕೃತ್ಯಗಳು 11ರಲ್ಲಿ ಪೇತ್ರನು ಸಂತೃಪ್ತಿಕರವಾದ ಫಲಿತಾಂಶವನ್ನು ಉಂಟುಮಾಡಿದಂತೆಯೇ ನೀವು ಸಹ ಮಾಡುವಂತವರಾಗ್ರಿ, ಏನೇ ಆದರೂ, ಫಲಿತಾಂಶವು ಪ್ರಮುಖವಾಗಿರದೆ, (1) ಪೇತ್ರನ ಹಾಗೆಯೇ ನಿಮ್ಮ ಪ್ರತ್ಯುತ್ತರವಿರಲಿ (2) ಆ ಅನುಭವದಿಂದ ಉತ್ತಮವಾದದ್ದನ್ನೆ ಕಲಿತುಕೊಳ್ಳಿರಿ.

ನಾವು ನೆಲಹಾಸಿನ ಮೇಲೆ ಕರೆಯಲ್ಪಟ್ಟಾಗ ಕ್ರೈಸ್ತರಂತೆಯ ವರ್ತಿಸೋಣ!

## ದೃಷ್ಯ ಸಂಬಂಧವಾದ – ಟಿಪ್ಪಣೆ

ಈ ಪಾಠದ ಕುರಿತು ಒಂದು ಚಿಕ್ಕ ನೆಲಹಾಸನ್ನು ನೀವು ಬಳಸಬಹುದು. ಪೇತ್ರನು ಆ ಹಾಸಿನ ಮೇಲೆ ಕರೆಯಲ್ಪಟ್ಟಾಗ, ನಿಂತುಕೊಂಡ ರೀತಿಯಲ್ಲಿ, ನೀವು ಸಹ ಆಗಾಗ್ಗೆ ನಿಲ್ಲಿರಿ ಮತ್ತು ಅವನಂತೆಯೇ ವರ್ತಿಸಿರಿ (ನೆಲಹಾಸಿನ ಅಂಗಡಿಯಲ್ಲಿ ಅದು ದೊರೆಯುವದು.)

## ಪ್ರಸಂಗದ ಟಿಪ್ಪಣೆ

ಅಪೊಸ್ತಲ ಕೃತ್ಯದಲ್ಲಿ ಅನೇಕಸಾರಿ ಅಪೊಸ್ತಲರು ಸಭಾ ಸಮಸ್ಯೆಗಳನ್ನು ಎದುರಿಸಬೇಕಾಯಿತು (ಅಪೊಸ್ತಲರ ಕೃತ್ಯಗಳು 5; 6; 11; 15). "ಸಭೆಯ ಸಮಸ್ಯೆಗಳನ್ನು ಪರಿಹರಿಸುವ ಕುರಿತು" ಲಾಭದಾಯಕವಾದ ಪ್ರಸಂಗಗಳನ್ನು ಮಾಡಬಹುದು.

---

ಟಿಪ್ಪಣಿಗಳು

[1]ಪೇತ್ರನನ್ನು "ನ್ಯಾಯ ವಿಚಾರಣೆಗೆ ಕರೆದಾಗ" ಎಂಬ ಶೀರ್ಷಿಕೆಯನ್ನು ಹೊಂದಬಹುದು. [2]ಪೇತ್ರನು ಬಹಳಷ್ಟು ಕಾಲ ಅಲ್ಲಿದ್ದನು, ಎಂದು ವೆಸ್ಟರ್ನ್ ಟೆಕ್ಸ್ಟ್ ತಿಳಿಸುತ್ತದೆ. ಎರಡು ಮತ್ತು ನಾಲ್ಕನೆಯ ಶತಮಾನದಲ್ಲಿ ರೋಮಪುರದಲ್ಲೂ ಹಾಗೂ ಅದರ ಸುತ್ತಲಿನ ಪ್ರದೇಶಗಳಲ್ಲೂ ಗ್ರಂಥಗಳನ್ನು ಪುನಃ ಬರವಣಿಗೆ ಮಾಡಿದ್ದರ ನಿಮಿತ್ತ ದೊರೆತ ಬರವಣಿಗೆಯಾಗಿದೆ. ವೆಸ್ಟರ್ನ್ ಟಕ್ಸ್ಟ್ ಪ್ರೇರಿತವಾದದ್ದಲ್ಲ.

[3]RSVಯಲ್ಲಿ "ಸುನ್ನತಿ ಸಂಘದವರು" ಮೂಲದಲ್ಲಿ ಸಂಘ ಎಂದಿರುವದಿಲ್ಲ. [4]ಕೊರ್ನೇಲ್ಯನು ಮತ್ತು ಅವನ ಮನೆಯವರು ಯೆಹೂದ್ಯರಾಗಿರದ, ಸುನ್ನತಿಯಿಲ್ಲದೆ, ಭಯ "ಭಕ್ತಿವುಳ್ಳವರಾಗಿದ್ದರು" ಎಂದು ವ್ಯಾಖ್ಯಾನ ತಿಳಿಸಲಾಗಿದೆ. [5]ವೆಸ್ಟರ್ನ್ ಟೆಕ್ಸ್ಟ್‌ನಲ್ಲಿ ವಚನ 2ರ ಅಂಶವನ್ನು ತಿಳಿಸಲಾಗಿದೆ. [6]ಪೇತ್ರನ ಹೊರತಾಗಿ ಮತ್ತೊಬ್ಬ ಅಪೊಸ್ತಲನು ಅನ್ಯರಿಗೆ ಸುವಾರ್ತೆ ಸಾರಲು ಕಳುಹಿಸಲ್ಪಟ್ಟಿದ್ದರು, ಪೇತ್ರನು ಅವನನ್ನು "ನೆಲಹಾಸಿಗೆ" ಕರೆಯುವ ಸಾಧ್ಯತೆಯಿತ್ತು. [7]*ಅಪೊಸ್ತಲರ ಕೃತ್ಯಗಳು, 2* "ಗೋಡೆಗಳನ್ನು ಕೆಡವಿ ಹಾಕುವ" ಪಾಠದಲ್ಲಿರುವ 10:9-16, 23, 48ರ ವಿವರಣೆಯನ್ನು ನೋಡಿರಿ. [8]ಇತರೆ ವಿವರಣೆಕಾರರ ಪ್ರಕಾರ, ಪೇತ್ರನ ಟೀಕಾಕಾರರು ವಿರೋಧ ಮಾತ್ರ ಸೂಚಿಸದೆ, ಅನ್ಯರ ಕುರಿತ ವರ್ತಮಾನವು, ಯೆಹೂದ್ಯರಲ್ಲಿ ಹಚ್ಚಿನ ಕೋಪಕ್ಕೆ ಗುರಿಮಾಡಬಹುದು ಎಂಬ ಭಯದಲ್ಲಿದ್ದರು. ಹಿಂಸೆಯ ಸಂಜೀವನವು ಅಪೊಸ್ತಲ ಕೃತ್ಯ 12ರಲ್ಲಿರುವಂತೆ, ಟೀಕಾಕಾರರ ಭಯವು ಅಲ್ಲಿರುವದಿಲ್ಲ. [9]Leonard Louis Levinson, *Webster's Unafraid Dictionary* (New York: Collier Books, 1967), 57. [10]ವಚನ 5ರಿಂದ 17ರ ವರೆಗಿನ ವಿವರಣೆಯನ್ನು *ಅಪೊಸ್ತಲರ ಕೃತ್ಯಗಳು, 2* ಪುಸ್ತಕದಲ್ಲಿ ಕೊರ್ನೇಲಿಯನ ಕುರಿತಾಗಿ ನೀಡಲಾಗಿದೆ.

[11]ಪೇತ್ರನ ನಿರಾಕರಣೆಯನ್ನು ಯೆಹೆಜ್ಕೇಲ 4:14ರಲ್ಲಿರುವ, ಯೆಹೆಜ್ಕೇಲನ ನಿರಾಕರಣೆಗೆ ಹೋಲಿಸಿರಿ. [12]ಪೇತ್ರನ ತನ್ನ ವಾದದಲ್ಲಿ ಕೊರ್ನೇಲ್ಯನ ಅಪರಿಮಿತವಾದ ಸದ್ಗುಣದ ಬಗ್ಗೆ ಮಾತನಾಡಿರುವದಿಲ್ಲ. ಅವನ ಟೀಕಾಕಾರರು ಕೊರ್ನೇಲ್ಯನ ಸದ್ಗುಣಗಳನ್ನು ಪರಿಗಣಿಸಲಿಲ್ಲ; ಆದರೆ ಪೇತ್ರನು ಅನ್ಯನೊಂದಿಗೆ ಭೋಜನ ಸ್ವೀಕಾರ ಮಾಡಿದ್ದನ್ನುಟೀಕಿಸಿದರು. [13]ನಾವು ಎಂಬುದು ಅಪೊಸ್ತಲರಿಗೆ ಸೂಚನೆ *ಅಪೊಸ್ತಲರ ಕೃತ್ಯಗಳು, 2* ಪುಸ್ತಕದ ಕಡೆಯ ಎರಡು ಪಾಠಗಳ ಟಿಪ್ಪಣಿಗಳನ್ನು ನೋಡಿರಿ. [14]*ಅಪೊಸ್ತಲರ ಕೃತ್ಯಗಳು, 2* ಪಂಚಾಶತ್ತಮ ಹಬ್ಬವಾಗಿದೆ, "ಉತ್ತಮನಾದ ಮನುಷ್ಯನು ಕಳೆದು ಹೋಗಿದ್ದನು" ಎಂಬ ಪಾಠವನ್ನು ನೋಡಿರಿ, ಮತ್ತು "ದೈವೀಕ ಶಕ್ತಿಯ ಮೂರು ಪ್ರಾಯೋಜನೆಗಳನ್ನು" ನೋಡಿರಿ. [15]ಮೂಲ ಬರವಣಿಗೆಗಳಲ್ಲಿ "ನಮ್ಮ" ಎಂಬುದರ ಬದಲಾಗಿ, ಕರ್ತನಾದ ಕ್ರಿಸ್ತ ಯೇಸುವನ್ನು ನಂಬಿದ ನಂತರ ಎಂಬುದಾಗಿದೆ. ಅಪೊಸ್ತಲರು ಎಂಬ ವ್ಯಾಖ್ಯಾನ. NIVಯಲ್ಲಿ "ಅವನು ನೀಡಿದನು ಎಂಬುದಾಗಿದೆ," ಅವನು ಕರ್ತನಾದ ಯೇಸುವಿನಲ್ಲಿ ನಂಬಿಕೆ ಇಟ್ಟವನು (KJV, RSV, ASV, ಮುಂತಾದವುಗಳನ್ನು ನೋಡಿರಿ). [16]ಪೇತ್ರನು "ನೆಲಹಾಸಿಗೆ" ಕರೆಯಲ್ಪಟ್ಟಾಗ, ಅವನು ಮಾಡಿದ ಹಾಗೂ ಮಾಡದೆ ಇದ್ದ ಕಾರ್ಯಗಳನ್ನು ವಿಮರ್ಶಿಸಿ. [17]"ಮಾನಸಾಂತರವು" ದೇವರ ವರವೆಂದು ಎರಡು ಕಾರಣಗಳಿಂದ ಗುರಿತಿಸಲಾಗಿದೆ: (1) "ಮಾನಸಾಂತರವು" ಅನ್ಯರಿಗೆ, ದೇವರಿಂದ ನೀಡಿರುವ ವರವಾಗಿದೆ, ಮತ್ತು (2) "ಮಾನಸಾಂತರಕ್ಕೆ" ಆತನು ನಡಿಸುತ್ತಾನೆ (ಗಾಸ್ಪೆಲ್).